# ವಚನ ಸಾಹಿತ್ಯದಲ್ಲಿ ಸಾಮಾಜಿಕ ಚಿಂತನೆ

**ಮನುಕುಮಾರ್ ಎಸ್.ವಿ.**

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಗ್ಲೋಬಲ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್ಮಂಟ್ ಸೈನ್ಸಸ್, ಬೆಂಗಳೂರು.

DOI: https://doi.org/10.5281/zenodo.15490876

## ABSTRACT:

ಸರಳವಾದ, ಸುಲಲಿತವಾದ, ಸುಮಾಧುರ್ಯತೆಯ ಕಂಪನ್ನು ಸೂಸಿದ ವೈಶಿಷ್ಟ್ಯಪೂರ್ಣವಾದ ಸಾಹಿತ್ಯವೇ "ವಚನ ಸಾಹಿತ್ಯ"

ಶಿವಶರಣರ ಅಂತರ್ಗತ ಅನುಭವದ ನಿರ್ಭಯವಾದ ನೀತಿ, ಮತ, ತತ್ವಭೋಧನೆಯ ಸಾರವಾಗಿದೆ.

ವಚನ ಸಾಹಿತ್ಯ ಒಂದು ಅನನ್ಯ ಮತ್ತು ಪ್ರಬಲ ಸಾಹಿತ್ಯ ಪ್ರಕಾರವಾಗಿದ್ದು ಈ ಸಾಹಿತ್ಯವು ಆಧ್ಯಾತ್ಮಿಕತೆ, ಸಮಾಜದ ಸುಧಾರಣೆ ಮತ್ತು ಅನುಭವ ಶ್ರದ್ಧೆಯ ಬಗೆಗಿನ ಆಳವಾದ ಚಿಂತನೆಗಳನ್ನು ಪ್ರತಿಬಿಂಬಿಸುತ್ತದೆ.

ವಚನ ಸಾಹಿತ್ಯ ಮುಖ್ಯ ಉದ್ದೇಶ ಸಮಾಜ ಸುಧಾರಣೆ. ರಾಜಕೀಯವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಆಂತರೀಕ ಪರಿಶುದ್ಧಿಗೆ ಮತ್ತು ದೈವೀಕ ಏಕತೆಗೆ ಮಹತ್ವ ನೀಡುವುದಾಗಿದೆ. ಸಮಾಜದಲ್ಲಿ ಜಾತಿ, ವರ್ಣ ಮತ್ತು ಲಿಂಗಭೇದಗಳನ್ನು ವಿರೋದಿಸಿ ಸಮಾನತೆಯ ಮತ್ತು ಜಾತಿ ರಹಿತ ಸಮಾಜದ ಸುಧಾರಣೇ ಮೂಡಿಸುವ ಉದ್ದೇಶವಾಗಿದೆ. ವಚನಕಾರರು ತಮ್ಮ ತಮ್ಮ ವಚನಗಳ ಮೂಲಕ ಒಂದು ಕ್ರಾಂತಿಮೂಡಿಸುವುದು 12ನೇ ಶತಮಾನ ವರವಾಗಿದೆ ಕಾಯಕ, ಭಕ್ತಿ ಕೆಲಸ ಮತ್ತು ಭಕ್ತಿಯ ಮೂಲಕ ವ್ಯಕ್ತಿಯ ಆತ್ಮವನ್ನು ಶದ್ಧಿಗೊಳಿಸುವ ಹಾಗು ಜೀವನದ ಉದ್ದೇಶವನ್ನು ತಿಳಿಸುವ ಸಂದೇಶವನ್ನು ನೀಡುತ್ತವೆ.

## KEYWORDS:

ವಚನ ಸಾಹಿತ್ಯ, ಸಾಮಾಜಿಕ ಪ್ರಜ್ಞೆ, ವರ್ಗ, ವರ್ಣ, ಜಾತಿ ತಾರತಮ್ಯ.

**ಸಾರ ಸಜ್ಜನರ ಸಂಗವ ಮಾಡುವುದು**
**ದೂರ ದುರ್ಜನರ ಸಂಗ ಬೇಡವಯ್ಯ**
**ಆವ ಹಾವಾದಡೇನು ವಿಷವೊಂದೇ**
**ಅಂತವರ ಸಂಗ ಬೇಡವಯ್ಯ.**
**ಅಂತರಂಗ ಶುದ್ಧವಲ್ಲದವರ ಸಂಗವು**
**ಶಿಂಗಿ ಕಾಳ ಕೂಟ ವಿಷವೊ ಕೂಡಲಸಂಗಮದೇವ.**

ಕಾಲ ಕಾಲಕ್ಕೆ ಮಾನವ ಸಮಾಜ ಬದಲಾವಣೆಯು ಹೊಂದುತ್ತಿರುವಂತೆಯೇ ಸಾಹಿತ್ಯವೂ ಬದಲಾವಣೆ ಹೊಂದುತ್ತಿರುತ್ತದೆ. ಇಂತಹ ಬದಲಾವಣೆ ಒಟ್ಟಿಗೆ ಆಗುವಂತದಲ್ಲ ಮನುಷ್ಯನ ಅಗಾದವಾದ ಆಲೋಚನೆ, ಸಾಮಾಜಿಕ ಚಿಂತನೆಯ

ಮೂಲಕ ಬದಲಾವಣೆ ಬಹುಕಾಲ ಬೇಕು ಎಂಬುದು ಎಲ್ಲರಿಗೂ ಅರಿವಾಗದಿರದು. ಕನ್ನಡ ಸಾಹಿತ್ಯದಲ್ಲೂ ಕೂಡ ಇಂತಹ ಮಹತ್ತರವಾದ ಬದಲಾವಣೆಯನ್ನು 11ನೇಶತಮಾನದ ಕೊನೆಯ ಭಾಗ 12 ಮತ್ತು 13ನೇ ಶತಮಾನದ ಆದಿ ಭಾಗದವರೆಗೂ ಕಾಣಬಹುದು ಈ ಕಾಲಘಟ್ಟ ಸಾಹಿತ್ಯ ಪ್ರಪಂಚದಲ್ಲಿ ಅಂದು ಒಂದು ಸಾಮಾಜಿಕವಾದ ಕ್ರಾಂತಿ ಎಂದರೂ ತಪ್ಪಾಗಲಾರದು ಇಂತಹ ಕ್ರಾಂತಿಯ ಕಹಳೆಯನ್ನೂದಿದ ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ವಚನ ಎಂದರೆ “ಮಾತು”, ವಚನವೆಂದರೆ “ಪ್ರಮಾಣ” ತೀನಂಶ್ರೀ ಯವರು ಹೇಳುವಂತೆ ಪದ್ಯದಷ್ಟು ಬಿಗಿಯಲ್ಲ, ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ ಇದು ಗದ್ಯ ಪದ್ಯಗಳ ನಡುವಿನ ಒಂದು ಮಾದರಿ ಎಂದು ಹೇಳಲಾಗಿದೆ ಹಾಗಾಗಿ ವಚನವೆಂದರೆ ವಿಶಿಷ್ಟವಾದ ಸಾಹಿತ್ಯ ಪ್ರಕಾರ, ಜನಪದ ಸಾಹಿತ್ಯ, ದಾಸಸಾಹಿತ್ಯ, ವಚನಸಾಹಿತ್ಯ ಈ ಮೂರು ಕನ್ನಡನಾಡಿನ ಬಹುದೊಡ್ಡ ಸಾಹಿತ್ಯ ಪ್ರಕಾರಗಳು ಆ ಕಾಲಕ್ಕಾಗಲೆ ಜಾತಿಹೆಸರಲ್ಲಿ, ದೇವರಹೆಸರಲ್ಲಿ, ಆರ್ಥಿಕ ಅಸಮಾನತೆ ಹೆಸರಲ್ಲಿ, ವರ್ಗ ವರ್ಣ ಈ ಬೇಧಗಳ ಹನ್ನಲೆಯಲ್ಲಿ ನೆಡೆಯುತ್ತಿದ್ದ ವೇಳೆಗೆ ಶರಣರು ಪ್ರಪಂಚಕ್ಕೆ ಕೊಟ್ಟಂತ ಅನುಭಾವದ ಸಾಹಿತ್ಯವೇ ವಚನ ಸಾಹಿತ್ಯ.

ಈ ಸಾಹಿತ್ಯದ ಮೂಲ ಆಶಯ ತಮ್ಮ ಆತ್ಮಕಲ್ಯಾಣದ ಜೊತೆಗೆ ಜಗತ್ತಿನ ಕಲ್ಯಾಣಮಾಡುವುದು, ಅಂದರೆ ಮೊದಲು ತಮ್ಮ ಆತ್ಮ, ಅಂತರಂಗ ಶುದ್ದಿಗೈದು “ಸಕಲ ಜೀವಾತ್ಮಗಳಿಗೆ ಲೇಸನ್ನೇ ಬಯಸುವ ಕುಲಜ” ಎನ್ನುವ ಹಾಗೆ ಒಂದು ವಿಶಿಷ್ಟವಾದ ಮಾನವೀಯ ಧರ್ಮದ ಮೌಲ್ಯಗಳನ್ನು ಜಗತ್ತಿಗೆ ಕೊಟ್ಟಂತ ದಾರ್ಶನಿಕರು ಬಸವಾದಿ ಶರಣರು ವಚನಕಾರರು.

ಈ ವಚನಗಳು ತಮ್ಮ ಕಾವ್ಯ ಪ್ರತಿಭೆಯನ್ನು ಪ್ರದರ್ಶಿಸುವುದಕ್ಕಾಗದೆ ತಮ್ಮ ಅನುಭವದ ಕ್ರಾಂತಿಕಾರಕ ಚಿಂತನೆಗಳನ್ನು ಅಭಿವ್ಯಕ್ತಿಗೊಳಿಸುವುದರ ಸುಂದರಗೊಳಿಸುವ ದಿಸೆಯಲ್ಲಿ ಜೊತೆಗೆ ಜನ ಸಾಮಾನ್ಯರ ಬದುಕನ್ನು ದಿಸೆಯಲ್ಲಿ ಸಹಜವಾಗಿ ಮೂಡಿಬಂದ ಅನುಭವದ ರಸಗಂಗೆಯೇ ವಚನ ಸಾಹಿತ್ಯ, ಇದೊಂದು ಸಾಮಾಜಿಕ ಚಿಂತನೆಯ ಸಾಹಿತ್ಯ.

ಈ ವಚನ ಸಾಹಿತ್ಯದ ಜೀವದ್ರವ್ಯ ಎಂದರೆ ವೈಚಾರಿಕವಾಗಿ ಸಾಮಾಜಿಕವಾಗಿ ಎಲ್ಲಾ ಕಾಲಕ್ಕೂ ಪ್ರಸ್ತುತವಾದ ಒಂದು ಸುಂದರ ಅನನ್ಯವಾದ ವಚನ.

**ಕಳಬೇಡ ಕೊಲಬೇಡ**
**ಉಸಿಯ ನುಡಿಯಲು ಬೇಡ**
**ಮುನಿಯಬೇಡ ಅನ್ಯರಕಂಡರೆ**
**ಅಸಯ್ಯ ಪಡಬೇಡ**
**ತನ್ನ ಬಣ್ಣಿಸಬೇಡ ಇದಿರ ಅಳಿಯಲುಬೇಡ**

**ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ**

ಈ ಸೂತ್ರದಲ್ಲಿ ಒಂದು ಸಾಮಾಜಿಕ ಚಿಂತನೆ ಇದೆ. ಇದು ಆತ್ಮ ವಿಮರ್ಶೆ ಮತ್ತು ಸಮಾಜ ವಿಮರ್ಶೆಯ ತುಂಬಾ ಸರಳವಾದ ವಚನದಂತೆ ಕಂಡರೂ ಆಳಕ್ಕಿಳಿದು ನೋಡಿದರೆ ತುಂಬಾ ಗಹನವಾಗಿ ಕಾಣುತ್ತದೆ. ಮನುಷ್ಯನಾಗಿ ಯಾವ ಅಪಮೌಲ್ಯಗಳನ್ನೂ ಹೊಂದದೆ ಬದುಕಿನಲ್ಲಿ ತ್ರಿಕರಣಶುಧ್ಧಿಯನ್ನು ಹೇಗೆ ಸಾಧಿಸಿಕೊಳ್ಳಬೇಕು ಎಂಬುದನ್ನು ವಿವರಿಸಿದ್ದಾರೆ.

ವಚನಕಾರರು ಕವಿಗಳಲ್ಲ, ಅವರು ಬರದ್ದು ಕಾವ್ಯವಲ್ಲ ಅವರ ಶೋತೃವರ್ಗವು ಕಾವ್ಯಾತ್ವಾದನ ಮಾಡುವ ಪಂಡಿತ ವರ್ಗವಲ್ಲ, ಇವರು ಮುಖ್ಯವಾಗಿ ಸಾಮಾಜಿಕ ಪ್ರಜ್ಞೆಯುಳ್ಳ ನೀತಿ ಬೋಧಕರು, ಸಮಾಜ ಸುಧಾರಕರು, ತಮ್ಮ ಅನುಭವಗಳನ್ನು ಸಮಾಜದಲ್ಲಿ ಹಂಚಿಕೊಳ್ಳಲು ಬಯಸಿದವರು. ಹಾಗಾಗಿ ವಚನಕಾರರು ಸಾಮಾಜಿಕ ಆಂದೋಲನಮಾಡಿ (ಆಂದೋಲನ ಎಂದರೆ ಜೀವನವನ್ನು ಕಟ್ಟಿಕೊಳ್ಳುವುದು) ಹೊಸ ಜೀವನವೆಂದರೆ ವ್ಯಕ್ತಿಗಳನ್ನು ಆಲೋಚಿಸುವಂತೆ ಮಾಡುವುದು ಅವರಲ್ಲಿ ಆತ್ಮ ವಿಶ್ವಾಸ ಮೂಡಿಸುವುದು, ಹೀಗಾಗಿ ಸಾಮಾಜಿಕ ಸುಧಾರಕರಾದ ವಚನಕಾರರು ತಮ್ಮನ್ನು ತಾವು ತಿದ್ದಿಕೊಂಡ ಸಾಧಕರನಿಸಿದ್ದಾರೆ.

ವಚನಕಾರರು ತಮ್ಮೊಳಗಿನ ಆದ್ಯಾತ್ಮಿಕ ಆಚಾರ, ವಿಚಾರ, ಶಿವಾಚಾರ ಗುಣಾಚಾರ ಮತ್ತು ನೃತ್ಯಾಚಾರಗಳೆಂಬ ಪಂಚಾಚಾರಗಳ ಮೂಲಕ ವ್ಯಕ್ತಿ ಲಿಂಗಾಯಿತ ಧರ್ಮವನ್ನು ಅನುಸರಿಸುತ್ತಾ ತನ್ನ ಸುತ್ತಲಿನ ಸಮಾಜದ ಬಗ್ಗೆ ಕಾಳಜಿಯನ್ನು ವಹಿಸುವಂತೆ ಮಾಡಿದರು. ಕಾಯಕದಿಂದ ಗಳಿಸಿದನ್ನು ಗುರು. ಲಿಂಗ ಜಂಗಮಕ್ಕೆ ಸಮರ್ಪಿಸಬೇಕು ಶಿವಭಕ್ತರಲ್ಲಿ ಜಾತಿ ವರ್ಣಾಶ್ರಮಗಳನ್ನು ನೋಡದೆ ಅವರ ಮನೆಯಲ್ಲಿ ಊಟ ಮಾಡಬೇಕು, ಶಿವಾಚಾರದ ನಿಂದನೆಯನ್ನು ಕೇಳಬಾರದು ಶಿವಶರಣರೇ ಹಿರಿಯರು. ತಾನು ಕಿರಿಯ ಎಂಬ ಭಾವನೆಯನ್ನು ಹೊಂದುವುದು ಇವು ಶರಣರಿಗಿರುವ ಯೋಗ್ಯತೆಯಾಗಿದೆ ಈ ಯೋಗ್ಯತೆಯೇ ನೊಂದ ಜನರನ್ನ ಪಟ್ಟಭದ್ರ ಹಿತಾ ಶಕ್ತಿಗಳಿಂದ ರಕ್ಷಿಸಲು ಇರುವ ಮೂಲ ಮಂತ್ರವಾಗಿದೆ.

**ಎನಗಿಂತ ಕಿರಿಯರಿಲ್ಲ. ಶಿವ ಭಕ್ತರಿಗಿಂತ ಹಿರಿಯರಿಲ್ಲ**
**ನಿಮ್ಮ ಪಾದಸಾಕ್ಷಿ, ಎನ್ನ ಮನಸಾಕ್ಷಿ**
**ಕೂಡಲಸಂಗಮದೇವಾ ಎನಗಿದೇ ದಿಭ್ಯ**

ಸ್ಪೃಶ್ಯ ಮತ್ತು ಅಸ್ಪೃಶ್ಯರನ್ನು ಶೋಷಣೆಯಿಂದ ಹೊರತರಲು ವಚನಕಾರರು ತಮ್ಮ ಅಧಿಕಾರವನ್ನು ಮೇಲ್ಜಾತಿಯನ್ನು ಶ್ರೀಮಂತಿಕೆಯನ್ನು ಬದಿಗೊತ್ತಿ ಸಾಮಾನ್ಯ ಜನರ ಬಳಿಗೆ ಹೋಗಿ ಅವರಲ್ಲಿದ್ದ ಮೌಡ್ಯವನ್ನು ತೊಡೆದುಹಾಕಿ, ಅನಾರೋಗ್ಯಕರವಾದ ಆಚರಣೆಗಳಿಂದ ಅವರನ್ನು ಪಾರುಮಾಡಿದರು ಪ್ರಾದೇಶಿಕ ದೈವಗಳ ಹೆಸರಲ್ಲಿ ಅವರನ್ನು ಬೇರೆ ಬೇರೆ ಗುಂಪುಗಳಾಗಿ ಒಡೆಯಲಾಗಿತ್ತು ಈ ರೀತಿಯ ಅಮಾನುಷ

ಆಚರಣೆಗಳ ಮೂಲಕ ಅವರು ತಾವು ಕೀಳು ಎಂಬ ಭಾವನೆಯನ್ನು ಹೊಂದುವಂತೆ ಮಾಡಲಾಗಿತ್ತು ಹಾಗಾಗಿ ಶಿವನೊಬ್ಬನೇ ದೈವ ಅವನನ್ನು ಪೂಜಿಸಿ ಮುಕ್ತಿಯನ್ನು ಹೊಂದಬಹುದು ಎಂಬ ಭಾವನೆಯನ್ನು ಸಾಮಾನ್ಯ ಜನರಲ್ಲಿ ಬಿತ್ತಲಾಯಿತು. ಕ್ರಮೇಣ ಅವರಲ್ಲಿ ಆತ್ಮವಿಶ್ವಾಸ ಮೂಡಿಸಿ ನಾವು ಕೀಳಲ್ಲ ಎಂಬ ಭಾವನೆಯನ್ನು ಮೂಡಿಸಲಾಯಿತು ಇಂತಹ ಆಂದೋಲನದ ರುವಾರಿಯಾದ ಬಸವಣ್ಣನವರನ್ನು ಕನ್ನಡದ ಸಾಮಾಜಿಕ ವಚನಚಳುವಳಿಯ ಹರಿಕಾರ ಎಂದು ಕರೆಯುವುದು ಸೂಕ್ತವೇ ಆಗಿದೆ.

ವಚನ ಸಾಹಿತ್ಯದಲ್ಲಿ ರಾಜ ಮಹಾರಾಜರ ಕಾಲದಿಂದಲೂ ಅಲ್ಲಿಯವರೆಗೆ ಸಮಾಜದ ಸಾಮಾಜಿಕ ವ್ಯವಸ್ಥೆ ತುಂಬಾ ಅಸಮಾನತೆಯಿಂದ ಅನಿಷ್ಠತೆಯಿಂದ ಕೂಡಿರುವುದನ್ನು ಗಮನಿಸಿ ಇದರಲ್ಲಿ ಮೇಲ್ಜಾತಿ, ಕೆಳಜಾತಿ ಗಂಡು ಹೆಚ್ಚು ಹೆಣ್ಣು ಕಡಿಮೆ ಈ ರೀತಿಯ ಹಲವಾರು ಲಿಂಗಾಧಾರಿತ ತಾರತಮ್ಯದ ದೃಷ್ಟಿಕೋನವನ್ನು ಬುಡಮೇಲು ಮಾಡುವ ಹಲವಾರು ಸಾಮಾಜಿಕ ಸಮಾನತೆಯ ಕಾರ್ಯದ ಹರಿಕಾರರಾಗುತ್ತಾರೆ. ಒಂದು ಕಡೆ ಬಿಸಿಲಲ್ಲಿ ದುಡಿದು ಊಟಕ್ಕೂ ಪರದಾಡುವ ನಿರ್ಗತಿಕರು ಮತ್ತೊಂದು ಕಡೆ ನೆರಳಲ್ಲಿ ದುಡಿದು ಶೋಷಣೆ ಮಾಡುವ ವರ್ಗ ಇನ್ನೊಂದೆಡೆ ಈ ರೀತಿಯ ಅಸಮಾನತೆಯ ವಿರುದ್ಧ ಹೋರಾಡಿ ಜೀವಿಗಳ ಪರ ಚಿಂತನೆಮಾಡಿ “ಕುಲ ಹದಿನೆಂಟು ಜಾತಿಯ ಕಾಯಕ” ಜೀವಿಗಳನ್ನು ಒಂದು ಗೂಡಿಸುವ ಕೆಲಸವನ್ನು ಮಾಡುತ್ತಾರೆ. ಕಮ್ಮಾರ, ಅಂಬಿಗ, ಬಡಿಗ, ಅಕ್ಕಸಾಲಿಗ, ಡೋಹರ ಕಕ್ಕಯ್ಯ, ಚಮ್ಮಾರ. ಹೀಗೆ ಹಲವಾರು ಕಾಯಕದ ಶ್ರಮ ಜೀವಿಗಳನ್ನು ಒಟ್ಟುಗೂಡಿಸಿ ಜಾತ್ಯಾತೀತತೆಯ ಆಧಾರದ ಮೇಲೆ ಸಂಘಟಿಸಿ ಸಮಾಜಕ್ಕೆ ಆರೋಗ್ಯಕರವಾದ ಸ್ಪಷ್ಟ ಸಂದೇಶವನ್ನು ನೀಡಿದ್ದಾರೆ.

**ಇವನಾರವ ಇವನಾರವ ಇವನಾರವ ನೆಂದೆನಿಸಯ್ಯಾ**
**ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯಾ**
**ಕೂಡಲ ಸಂಗಮದೇವ ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯಾ**

ಇವ ಯಾವ ಜಾತಿಯವನು ಅವನು ಯಾವ ಜಾತಿಯವನು ಎಂದು ಜಾತಿ ದೃಷ್ಟಿಯಿಂದ ನೋಡದೆ ಎಲ್ಲರನ್ನೂ ನಮ್ಮವರು ಎಂಬ ವಿಶಾಲಭಾವದಿಂದ ನೋಡುವ ಮಾನವೀಯ ಚಿಂತನೆಯನ್ನು ಮಾಡಿದ್ದಾರೆ.

ಬಸವಣ್ಣನವರು ಜಾತಿ ವ್ಯವಸ್ಥೆಯ ಪ್ರತಿಪಾದಿಸುವಂತಹ ಹಲವಾರು ಆಚರಣೆಗಳು ಮತ್ತು ಮೌಢ್ಯತೆಯನ್ನು ಬಿತ್ತುವ ವೇದ ಶಾಸ್ತ್ರಗಳನ್ನು ವಿರೋದಿಸುವ ನಿಟ್ಟಿನಲ್ಲಿ ಅನಾಚಾರದ ದೃಷ್ಟಾಚಾರದ ಬಗೆಗೆ ಕೆಲವು ನಿಯಮಗಳನ್ನು ಸ್ಪಷ್ಟ ಪಡಿಸುತ್ತಾರೆ

**ವೇದಕ್ಕೆ ಹೆರೆಯ ಕಟ್ಟುವೆ**
**ಶಾಸ್ತ್ರಕ್ಕೆ ನಗಳನಿಕ್ಕುವೆ**
**ತರ್ಕಕ್ಕೆ ಬೆನ್ನ ಬಾರನ್ನೆತ್ತುವೆ**
**ಆಗಮನದ ಮೂಗ ಕುಯ್ಯುವೆ**
**ಮಹಾದಾನಿ ಕೂಡಲ ಸಂಗಮದೇವಾ**
**ಮಾದಾರ ಚೆನ್ನಯ್ಯನ ಮಗ ನಾನಯ್ಯ**

ಎಂದು ಹೇಳುವುದರ ಮೂಲಕ ವೇದಗಳು ಮೌಢ್ಯಗಳನ್ನು ಬಿತ್ತಿ ಸಮಾಜವನ್ನು ಕೆಳಸ್ಥರದಲ್ಲಿ ಇಟ್ಟಿದ್ದರ ಅನಿಷ್ಟ ಪದ್ಧತಿಗಳನ್ನು ಬಸವಣ್ಣ ತಮ್ಮ ಆದ್ಯಾತ್ಮಕ ಚಿಂತನೆಗಳ ಮೂಲಕ ಸಮಾಜವನ್ನು ಮೇಲೆತ್ತುವ ಕೆಲಸವನ್ನು ಮಾಡುತ್ತಾರೆ.

ಇನ್ನು ಧಾರ್ಮಿಕ ವಿಚಾರದಿಂದ ನೋಡುವುದಾದರೆ ದೇವಾಲಯಗಳನ್ನು ಸಾಮಾನ್ಯ ಜನರಿಗೆ ಶೋಷಣೆ ಮಾಡಲೆಂದೇ ನಿರ್ಮಾಣಮಾಡಲಾಗುತ್ತಿತ್ತು ಪ್ರತಿಯೊಬ್ಬರ ಭಾವನೆಗಳಲ್ಲಿ ನಂಬಿಕೆಯಂದರೆ ಅದು ದೈವ, ಈ ದೈವ ಮತ್ತು ಧರ್ಮದ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸಿ ತಮ್ಮ ಐಶ್ವರ್ಯಗಳನ್ನು ಪ್ರದರ್ಶನ ಮಾಡುತ್ತಿದ್ದರು ಇವುಗಳು ಎಲ್ಲರಿಗೂ ಪ್ರವೃಶವಿಲ್ಲದ ಶೋಷಣೆಯ ರಂಗ ಮಂಟಪದಂತಿದ್ದವು ಹಾಗಾಗಿ ವಚನಕಾರರು ದೇವಸ್ಥಾನಗಳನ್ನು

ಬಹಿಸ್ಕರಿಸಿದರು ಈ ರೀತಿಯಾಗಿ ಮೇಲ್ವರ್ಗದವರ ಸ್ಥಾವರ ಲಿಂಗವನ್ನು ಸಂಪೂರ್ಣ ನಿರಾಕರಿಸಿ ಐಶ್ವರ್ಯ ಅಧಿಕಾರ ಕುಲಾಭಿಮಾನ ಕರ್ಮ ಮುಂತಾದುವೆಲ್ಲವನ್ನು ತೊಡೆದುಹಾಕಿ ದೇವಾಲಯದ ಸಮಸ್ಯೆಗಳನ್ನು ಬಗೆ ಹರಿಸಿದ್ದು ಬಹುದೊಡ್ಡ ಸಾಮಾಜಿಕ ಕ್ರಾಂತಿಯಾಯಿತು

**“ಉಳ್ಳವರು ಶಿವಾಲಯವ ಮಾಡುವರು**
**ನಾನೇನ ಮಾಡುವೆ, ಬಡವನಯ್ಯಾ**
**ಎನ್ನ ಕಾಲೆ ಕಂಬ ದೇಹವೆ ದೇಗುಲ**
**ಶಿರವೇ ಹೊನ್ನ ಕಲಶವಯ್ಯಾ**
**ಕೂಡಲಸಂಗಮದೇವಾ, ಕೇಳಯ್ಯಾ**
**ಸ್ಥಾವರಕ್ಕಳಿವುಂಟು, ಜಂಗಮಕ್ಕಳಿವಿಲ್ಲ”**

ಚಿದಾನಂದ ಮೂರ್ತಿಯವರ ಅಭಿಪ್ರಯಪಡುವಂತೆ ದೇವಸ್ಥಾನವು ಅಸ್ಪೃಶ್ಯರನ್ನು ಬಹಿಷ್ಕರಿಸಿದರೆ ವಚನಕಾರರು ದೇವಸ್ಥಾನವನ್ನೇ ಬಹಿಷ್ಕರಿಸಿದರು. ಮೇಲ್ವರ್ಗದವರ ಪ್ರತಿಷ್ಠೆಗೆ ಬಲಿಯಾಗಿದ್ದ ಅಸ್ಪೃಶ್ಯರಿಗೆ ಆತ್ಮವಿಶ್ವಾಸವನ್ನು ಮೂಡಿಸುವಲ್ಲಿ ಇದು ಬಹಳ ಪರಿಣಾಮಕಾರಿ ಮಾರ್ಗವಾಯಿತು. ಮನುಷ್ಯರ ದೇಹವೇ ದೇಲಾಲಯ, ಅವರ ಕಾಲುಗಳೇ ದೇವಾಲಯವನ್ನು ಎತ್ತಿಹಿಡಿದಿರುವ ಕಂಬಗಳು, ಅವರ ತಲೆಯೇ ದೇವಾಲಯದ ಮೇಲಿಟ್ಟಿರುವ ಬಂಗಾರದ ಗೋಪುರ,

ಅವರು ಕಟ್ಟಿರುವಂತಹ ದೇವಾಲಯಗಳು ನಶಿಸಿ ಹೋಗುತ್ತವೆ ಆದರೆ ಇಷ್ಟಲಿಂಗವನ್ನು ಭಕ್ತನ ಕರ್ಯಗಳು ಶಾಶ್ವತವಾಗಿ ಉಳಿಯುತ್ತವೆ. ಉಳ್ಳವರು ಶಿವಾಲಯವನ್ನು ನಿರ್ಮಿಸಿಕೊಳ್ಳಲಿ, ನಾವು ನಮ್ಮ ಭಗವಂತನೆಂದಿ ನಂಬಿ ಸಮಾಜಮುಖಿ ಕಾರ್ಯಗಳನ್ನು ಮಾಡೋಣ ಎಂಬುದು ಬಸವಣ್ಣನವರ ತತ್ವವಾಗಿದೆ

ವಚನಗಳು ಸರ್ವಕಾಲಕ್ಕೂ ಬದಲಾಹಿಸದಂತ ಸಂವಿದಾನದ ರೀತಿಯ ಚಿಂತನೆಗಳಾಗಿವೆ. ಶಿವಶರಣರು ಇಂತಹ ಮಾನವೀಯ ಮೌಲ್ಯಗಳನ್ನು ಜ್ಞಾನದ ಮೂಲಕ ಅಂದಕಾರದ ಕತ್ತಲೆಯನ್ನು ಹೋಗಲಾಡಿಸುವಂತ ಸಾಮಾಜಿಕ ಚಿಂತನೆಯನ್ನು ಮಾಡಿದ್ದಾರೆ. ಶಿವ ಶರಣರು ಪ್ರತಿಪಾದನೆ ಮಾಡಿದಂತ ಬಹುದೊಡ್ಡ ಪ್ರತಿಪಾದನೆ ಎಂದರೆ ಜ್ಞಾನ ಮತ್ತು ಭಕ್ತಿ, ಜ್ಞಾನ-ಭಕ್ತಿಯನ್ನು ಸಾರುವ ಅಲ್ಲಮ್ಮಪ್ರಭು ರವರ ಒಂದು ಅಮೂಲ್ಯವಾದ ವಚನ

**ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯ**
**ಜ್ಯೋತಿಯ ಬಲದಿಂದ ತಮಂದದ ಕೇಡು ನೋಡಯ್ಯ**
**ಸತ್ಯದ ಬಲದಿಂದ ಅಸತ್ಯದ ಕೇಡು ನೋಡಯ್ಯ**
**ಪರುಸದ ಬಲದಿಂದ ಅವರೋಹದ ಕೇಡು ನೋಡಯ್ಯ**
**ನಿಮ್ಮ ಶರಣರ ಅನುಭಾವದ ಬಲದಿಂದ ಎನ್ನ ಬವದ ಕೇಡು ನೋಡಯ್ಯ**

ಜ್ಞಾನ ಎಂಬುದು ಅಜ್ಞಾನಹೋಗಲಾಡಿಸುವಂತ ಸಾಧನ ಜ್ಞಾನ ಎಂಬುದು ಕತ್ತಲೆಯನ್ನು ಹೋಗಲಾಡಿಸುವಂತ ಸಾಧನ ಜ್ಞಾನ ಎಲ್ಲಿರುತ್ತೋ ಅಲ್ಲಿ ಸತ್ಯ ವಿರುತ್ತೆ ಎಂದು ವ್ಯಜ್ಞಾನಿಕವಾದ ಸಾಮಾಜಿಕ ಚಿಂತನೆಯನ್ನು ತಿಳಿಸಲಾಗಿದೆ.

ಒಟ್ಟಾರೆಯಾಗಿ ವಚನಗಳು ಕನ್ನಡಕ್ಕೆ ಭಾಷೆಗೆ ಮತ್ತು ಸಾಹಿತ್ಯಕ್ಕೆ ಅನುಭವದ ಹೊಸ ಮೆರಗು ನೀಡುವುದರ ಜೊತೆಗೆ ಅಭಿವ್ಯಕ್ತಿಗೆ ಪರಿಣಾಮಕಾರಿ ಮಾಧ್ಯಮವೆಂಬುದನ್ನು ತೋರಿಸಿಕೊಳ್ಳುವ ಜೊತೆಗೆ ಸಾಮಾಜಿಕ ಬದಲಾವಣೆ ತರುವ ತಂಪಾದ ಗಾಳಿಯನ್ನು ಅರಿಯಬಹುದು. ಆದರೆ ಪ್ರಸ್ತುತ ದಿನಗಳಲ್ಲಿ ನೈತಿಕ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿವೆ. ಬದುಕಿನ ಚಿಂತನೆಗಳ ಮೌಲ್ಯಗಳು ಕುಸಿಯುತ್ತಿರುವ ಕಾಲಘಟ್ಟದಲ್ಲಿ ಜಾಗೃತಗೊಳಿಸುವ ಕಾರ್ಯ ವಚನಗಳ ಹಿನ್ನಲೆಯಿಂದ ನೆಡೆಯುತ್ತಿರುವುದು ಇಂದಿನ ಯುವ ಸಮಾಜಕ್ಕೆ ಪೂರಕವಾಗಿವೆ.

## ಪರಾಮರ್ಶನ ಗ್ರಂಥಗಳು:


1. ಚಿದಾನಂದ ಮೂರ್ತಿ ಎಂ., (2008), ವಚನ ಸಾಹಿತ್ಯ: ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ: ಸಂಪುಟ–5, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ನಾಗಭೂಷಣ ಸ್ವಾಮಿ ಓ.ಎಲ್., (2018), ವಿಮರ್ಶೆಯ ಪರಿಭಾಷೆ, ಅಭಿನವ ಪ್ರಕಾಶನ, ಬೆಂಗಳೂರು.
3. ನಿಂಗಣ್ಣ ಜಿ.ಸಿ., (2012), ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.